ಮತ್ತು ಮುಂದಿನ ಲೋಕಸಭೆ ಚುನಾವಣೆಯನ್ನು ಬಹಿಷ್ಕಾರ ಮಾಡುವ ವಿಚಾರದಲ್ಲಿ ಕೂಡ ಇದ್ದಾರೆ, ಅಲ್ಲಿ ಪರಿಸ್ಥಿತಿಯು ಬಹಳ ಗಂಬೀರ ಇದೆ. ಆದ್ದರಿಂದ ಸರಕಾರ ಒಂದು ಹೇಳಿಕೆಯನ್ನು ಕೊಡಬೇಕು.

ಅಧ್ಯಕ್ಷರು: ಹಾಗಾದರೆ ಸರಕಾರದವರು ಏನೆಂದು ಹೇಳಿಕೆಯನ್ನು ಕೊಡಬೇಕು?

ಶ್ರೀ ಮಲ್ಲಿಕಾರ್ಜುನ ದಿವಟರ್: ಮುಂದೆ ಜಿಲ್ಲೆಗಳನ್ನು ಪುರರ್ ರಚಿಸುವಾಗ ಕೊಪ್ಪಳ ಜಿಲ್ಲೆಯನ್ನು ಮಾಡುತ್ತೇವೆ ಎಂದು ಹೇಳ ಬೇಕು. ಮೊದಲ ಕಂತಿನಲ್ಲಿಯೇ ಮಾಡಬೇಕು.

4) ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಔಷದಿಯ ಕೊರತೆ.

ಶ್ರೀ ರುಕ್ಮಯ್ಯ ಪೂಜಾರಿ: ಮಾನ್ಯ ಅಧ್ಯಕ್ಷರೆ, ಮಂಗಳೂರು ವೆನ್‌ಲಾಕ್ ಆಸ್ಪತ್ರೆಯಲ್ಲಿ ಮೆಡಿಸಿನ್‌ನ ಕೊರತೆಯ ಬಗ್ಗೆ ತುಂಬಾ ದೂರು ಬರುತ್ತಾ ಇದೆ. ನಮ್ಮ ಹಳ್ಳಿಗಳಿಂದ ಅಲ್ಲಿಗೆ ಹೋಗತಕ್ಕಂಥ ಪಾಪದ ಜನರು ಅಲ್ಲಿಗೆ ಹೋಗಿ ಉಪಚಾರಕ್ಕೆ ಹೋದಾಗ ಅಲ್ಲಿಯ ಡಾಕ್ಟರು ಅವರಿಗೆ ಸುಮಾರು 100-200 ರೂಪಾಯಿಗಳ ಔಷಧಿಗೆ ಚೀಟಿ ಬರೆದುಕೊಡುತ್ತಾರೆ. ಬಡವರು ಹೋಗಿ ಎಲ್ಲಿಂದ ಈ ಹಣವನ್ನು ತರುವುದು? ಮತ್ತು ಅಲ್ಲಿರತಕ್ಕಂಥ ಮೆಶಿನ್ಸ್ ಕೂಡ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಇನ್ನೂ ಅನೇಕ ದೂರುಗಳು ಬರುತ್ತಾ ಇವೆ. ಆ ಬಗ್ಗೆ ಸುಕ್ತ ತನಿಖೆಯನ್ನು ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ತಮ್ಮಲ್ಲಿ ನನ್ನ ಒಂದು ಅರಿಕೆ ಇದೆ. ನಾನು 4-3-91ಕ್ಕೆ ಒಂದು ವಿಚಾರವನ್ನು ಗಮನ ಸೆಳೆಯುವ ಸೂಚನೆಯ ಮೂಲಕ ತೆಗೆದುಕೊಳ್ಳಬೇಕೆಂದು ಕಳುಹಿಸಿದ್ದೆ. 22 ದಿವಸಗಳು ಆಯಿತು. ಇದುವರಿಗೆ ಅದು ಬಂದಿಲ್ಲ, ದಯಮಾಡಿ ಅದು ಉಂಟೋ ಇಲ್ಲವೋ ಎಂಬುದನ್ನಾದರೂ ತಾವುಗಳು ಹೇಳ ಬೇಕು. ಇಲ್ಲವಾದರೆ ನನಗೆ ದಯಮಾಡಿ ಅವಕಾಶ ಕೊಟ್ಟರೆ ಅದನ್ನು ನಾನು ಹೇಳುತ್ತೇನೆ ಮಾನ್ಯ ಗೃಹಸಚಿವರೂ ಇದ್ದಾರೆ ಏನಾದರೂ ಉತ್ತರವನ್ನು ಹೇಳುವುದಾದರೆ ಹೇಳಬಹುದು. ಅನುಮತಿ ಕೊಟ್ಟರೆ ಹೇಳುತ್ತೇನೆ, ಬಹಳ ಪ್ರಯತ್ನಪಟ್ಟೆ ನಿಮಗೆ ಖಾಸಗಿಯಾಗಿಯೂ ಹೇಳಿದ್ದೇನೆ. ಹೇಳದಿದ್ದರೆ ನನ್ನ ಕರ್ತವ್ಯಲೋಪ ಮಾಡಿದಹಾಗೆ ಆಗುತ್ತದೆ. ತಾವುಗಳು ಅವಕಾಶ ಕೊಟ್ಟರೆ ನನ್ನ ಕರ್ತವ್ಯವನ್ನು ಪೂರೈಸುವುದಕ್ಕೆ ಆಗುತ್ತದೆ.

5) ರಾಜ್ಯದ ವಿವಿಧ ಬಾಗಗಳಲ್ಲಿ ಕುಡಿಯುವ ನೀರಿನ ಅಭಾವ

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೆ, ಮೂಡಿಗೆರೆ ಟೌನ್ ಮತ್ತು ಕಳಸ ಹೋಬಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಸಿಕ್ಕಾಪಟ್ಟೆ ಜಾಸ್ತಿಯಾಗಿದೆ. ಪಿ.ಡಬ್ಲ್ಯೂ.ಡಿ ಟ್ಯಾಂಕರ್‌ನಲ್ಲಿ ಪ್ರತಿನಿತ್ಯ ನೀರನ್ನು ಒದಗಿಸುವ ವ್ಯವಸ್ಥೆ ಇದೆ. ನಾನು ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರಬೇಕೆಂದು ನಿಯಮ 334ರ ಮೇಲೆ ನೋಟೀಸ್ ಹಾಕಿದ್ದೆ. ಆದರೆ ಅದು ಇವೊತ್ತ ಬಂದಿಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲಿದ್ದಾರೆ. ಅಲ್ಲಿ 29ರಂದು ಮುಖ್ಯಮಂತ್ರಿಯವರ ಕಾರ್ಯಕ್ರಮವಿದೆ. ಅವರು ಕೊಡದಲ್ಲಿ ನೀರನ್ನು ತೆಗೆದುಕೊಂಡು ಹೋದರೆ ಅದು ಸರಿಯಾಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಸಚಿವರು ಅದನ್ನು ನಿವಾರಣೆ ಮಾಡಲು ಏನಾದರೂ ಕ್ರಮಕೈಗೊಳ್ಳುತ್ತಾರೆಯೇ?

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಸದ್ಯಸಿಣಿಯವರಾದ ಮೋಟಮ್ಮನವರ ಮಾತನ್ನು ಕೇಳಿದ್ದೇನೆ. ಅವರು ಕೇಳಿದ್ದನ್ನೆಲ್ಲ ಮಂಜೂರು ಮಾಡಲಿಕ್ಕೆ ಆದೇಶ ಕೊಟ್ಟಿದ್ದೇನೆ. ಅವರ ಕೆಲಸವನ್ನು ಮಾಡುವುದನ್ನೆಲ್ಲಾ ಮಾಡಿದ್ದೇನೆ.

ಶ್ರೀಮತಿ ಮೋಟಮ್ಮ: ಅಲ್ಲಿ ವಾಟರ್ ಸಪ್ಲೈ ಇದೆ. ಸಾಕಷ್ಟು ನೀರನ್ನು ಸರಬರಾಜು ಮಾಡಲಿಕ್ಕೆ ಆಗುತ್ತಿಲ್ಲ. ಕಳಸ ವಾಟರ್ ಸಪ್ಲೈ ಫೆಲ್ಯೂರ್ ಆಗಿದೆ. ಆದ್ದರಿಂದ ಪ್ರತಿದಿನ ಕಳಸ ಮತ್ತು ಮೂಡಿಗೆರೆ ಟೌನ್‌ನಲ್ಲಿ ಟ್ಯಾಂಕರ್ ಮೂಲಕ ನೀರನ್ನು ಒದಗಿಸುತ್ತಿದ್ದೇವೆ. ಈ ತಿಂಗಳು 29ರಂದು ಕಾರ್ಯಕ್ರಮ ಇರುವುದರಿಂದ ಹೆಚ್ಚಿನ ಗಲಾಟೆಯಾಗಬಹುದೆಂದು ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಬಸವಲಿಂಗಪ್ಪ : ಅದು ನನ್ನ ಗಮನಕ್ಕೆ ಬಂದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿ ಒತ್ತಾಯ ತರುತ್ತಿದ್ದೇನೆ. ಅವರೇನಾದರೂ ಧರ್ಮದರ್ಶಿ ರೀತಿಯಲ್ಲಿ ಮಂತ್ರಿಯವರು ಕೊಟ್ಟಂತಹ ರೀತಿಯಲ್ಲಿ ಹಗುರವಾದಂತಹ ರೀತಿಯಲ್ಲಿ ತೆಗೆದುಕೊಳ್ಳದೆ ನಾವು ಕೇಳಿದಂತಹ ಪ್ರಶ್ನೆಗಳಿಗೆ ಉತ್ತರ ತರಿಸಿ ಅವುಗಳ ಬಗ್ಗೆ ಸರಿಯಾದಂತಹ ಕ್ರಮ ತೆಗೆದುಕೊಳ್ಳಲು ಏನಾದರೂ ಆದೇಶ ನೀಡುತ್ತೀರಾ?

ಅಧ್ಯಕ್ಷರು: ಮಾನ್ಯ ಮೋಟಮ್ಮನವರು ಹೇಳಿದ್ದನೆಲ್ಲಾ ಮಾಡಿದ್ದೇವೆಂದು ಅವರು ಹೇಳಿದ್ದಾರೆ. ಇನ್ನೇನು ಆಗಬೇಕು ಮೋಟಮ್ಮನವರೆ, ಅವರು ನಿಮ್ಮ ಮೇಲೆಯೇ ಹಾಕಿದ್ದಾರೆ.

ಶ್ರೀಮತಿ ಮೋಟಮ್ಮ: ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಆಗಿಲ್ಲ. ಬೇರೆ ಎಲ್ಲಾ ಮಾಡಿಕೊಟ್ಟಿದ್ದಾರೆ. ಅವರಿಗೆ ಅಭಿನಂದಿಸುತ್ತೇನೆ.

ಅಧ್ಯಕ್ಷರು: ಕುಡಿಯುವ ನೀರಿನ ವ್ಯವಸ್ಥೆ ಜಿಲ್ಲಾಪರಿಷತ್ತಿಗೆ ಸೇರಿದ್ದುದು ತಾನೆ.

ಶ್ರೀಮತಿ ಮೋಟಮ್ಮ: ಜಿಲ್ಲಾಪರಿಷತ್ತಿಗೆ ಇವರೇ ಹಣವನ್ನು ಕೊಡಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ: ಶ್ರೀಮತಿ ಮೋಟಮ್ಮನವರು ಹೇಳಿರುವುದನ್ನೆಲ್ಲಾ ಮುಂಜೂರು ಮಾಡಿದ್ದೇನೆ. ಇದರ ಬಗ್ಗೆ ನ್ಯೂನತೆ ಏನಾದರೂ ಇದ್ದರೆ ಅವರು ಬಂದು ಹೇಳಿದರೆ ಮಾಡಿಸಿಕೊಡುತ್ತೇವೆ.

ಶ್ರೀ ಕೆ. ಗಂಗಾಧರಗೌಡ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇಣಿದಾರರು ಕಟ್ಟುವಂಥ ಕಂತುಗಳನ್ನು ಮಾಫಿ ಮಾಡಿದ್ದಾರೆ. ದಸಗಳಿಗೆ ಪರಿಹಾರ ಹಣವನ್ನು ಮಾಫಿ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಎಲ್.ಡಿ. ಬ್ಯಾಂಕ್‌ನವರು ಮಾತ್ರ ಸಾಲವನ್ನು ವಸೂಲುಮಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಬೇಕು. ಸಾಲವನ್ನು ವಸೂಲು ಮಾಡುತ್ತೀರಾ ಅಥವಾ ಮಾಫಿ ಮಾಡುತ್ತೀರಾ? ಇದು ಬರೀ ಆಶ್ವಾಸನೆಯೇ ಅಥವಾ ಇವರಿಂದ ಗೇಣಿದಾರರಿಗೆ ರಿಯಾಯತಿ ಸಿಗುತ್ತದೆಯೇ ಎಂದು ತಿಳಿಸಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಶಿಕ್ಷಣ ಸಚಿವರಿಗೆ ನಾನು ಹೇಳತಕ್ಕ ವಿಚಾರದ ಬಗ್ಗೆ ಹಿಂದೆಯೇ ಗಮನಕ್ಕೆ ತಂದಿದ್ದೆ. ಹಿರೆಕೆರೂರಿನಲ್ಲಿ ಡಿಗ್ರಿ ಕಾಲೇಜು ಇದೆ. ಅಲ್ಲಿ ಬಿ.ಎ. ಒಂದಕ್ಕೆ ಪ್ರವೇಶ ಕೊಡುವುದಕ್ಕೆ ಆಗುವುದಿಲ್ಲವೆಂದು ಬಿ.ಕಾಂ.ನ 33ವಿದ್ಯಾರ್ಥಿಗಳಿಗೆ ಪ್ರವೇಶ ಕೊಟ್ಟಿದ್ದಾರೆ. ನಂತರ ವಿಶ್ವವಿದ್ಯಾನಿಲಯದವರು ಬಿ.ಕಾಂ.ನಿಂದ ಬಿ.ಎ.ಗೆ ಅನುಮತಿ ಕೊಟ್ಟಿದ್ದಾರೆ. ಬಿ.ಎ. ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕೂರಲು ಅನುಮತಿ ಕೊಡಬೇಕೆಂದು ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಮಂತ್ರಿಗಳು ವಿಶ್ವವಿದ್ಯಾನಿಲಯದವರಿಗೆ, ತೊಂದರೆಯಾಗಿರತಕ್ಕ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕೂರಲು ಅನುಮತಿ ಕೊಡಿ ಎಂದು ಹೇಳಿದ್ದೇವೆಂದು ಹೇಳಿದರು. ಆದರೆ ಇದುವರೆಗೂ ಆ ವಿಶ್ವವಿದ್ಯಾನಿಲಯದವರು ಆ ವಿದ್ಯಾರ್ಥಿಗಳಿಂದ ಫಾರಂ ಅನ್ನು ತುಂಬಿಸಿಕೊಂಡಿಲ್ಲ. ಬಿ.ಕಾಂ.ನಿಂದ ಬಿ.ಎ.ಗೆ ಅನುಮತಿಯನ್ನು ಕೊಟ್ಟವರು ಅವರೇ. ನಮ್ಮ ತಾಲ್ಲೂಕಿನ, ಹಾನಗಲ್ ರಾಣೆಬೆನ್ನೂರು, ಕಾಲೇಜಿನ ವಿದ್ಯಾರ್ಥಿಗಳಿಗೆ ಒಂದು ವರ್ಷ ಹಾಳಾಗಿದೆ.

ಇಷ್ಟೊಂದು ಕಳಕಳಿಯಿಂದ ಸರ್ಕಾರ ಹೇಳಿದರೂ ವಿಶ್ವವಿದ್ಯಾನಿಲಯದವರು ಏಕೆ ಮಾಡಲಿಲ್ಲ? ದಯವಿಟ್ಟು ಇದರ ಬಗ್ಗೆ ತೀವ್ರವಾದಂತ ಕ್ರಮ ತೆಗೆದುಕೊಂಡು ಆ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕೂಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SHRI SUBHASH S. JOSHI (NIPPANI): Three weeks back, I had sent two Calling Attention motions, but they have not come up for discussion. If you give me one or two minutes time I will bring them to your notice.

The drinking water problem at Nippani is very acute and though the Government has sanctioned this scheme, the water in the tank is absolutely dried. Now water has to be transported from Maharashtra itself. So the city Municipal Council, Nippani, is not in a position and not afford to transport water. Therefore, if the Hon.Minister for housing and Urban Development gives some scarcity fund, then only this water problem will be solved.

The second calling attention motion was about the racket of selling girls in the big Cities of Maharashtra from Chikodi taluks. The Maharashtra police is coming to Chikodi taluka and are exploring and are also finding some racket there but the Karnataka police are not helping them and they are not giving assistance to them. In that connection also I have give one calling attention motion. These are the two points on which I would like to get the reply of the Hon.Ministers.

ಶ್ರೀ ಕೆ.ಜೆ. ಜಾರ್ಜ್: ನಿಪ್ಪಾಣಿಯಲ್ಲಿ ಕುಡಿಯುವ ನೀರಿನ ವಿಚಾರದಲ್ಲಿ ಹೊಸ ಯೋಜನೆಯನ್ನು ಹಾಕಿಕೊಂಡು ಮೊನ್ನೆ ತಾನೆ ನಾನು ಹೋಗಿ ಫೌಂಡೇಶನ್ ಸ್ಟೋನ್ ಹಾಕಿಬಿಟ್ಟು ಬಂದಿದ್ದೇನೆ. ಆ ಕೆಲಸಕ್ಕೆ ಕರೆದಿದ್ದೇವೆ, ಅದಷ್ಟು ಬೇಗ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಡೆಪ್ಯೂಟಿ ಕಮಿಷನ್ನರ್‌ರವರು 4-5 ಕೊಳವೆ ಬಾವಿಯನ್ನು ಹಾಕಿಸಿದ್ದಾರೆ. ಮತ್ತಷ್ಟು ಕೊಳವೆ ಬಾವಿಯನ್ನು ಹಾಕಬೇಕಾದರೆ ನಾನು ಆದೇಶವನ್ನು ಕೊಡುತ್ತೇನೆ.

SRI. SUBHASH S. JOSHI: All the borewells have failed.

ಶ್ರೀ ಧರ್ಮಸಿಂಗ್: ಅದರ ಬಗ್ಗೆ ತನಿಖೆ ಮಾಡಿ ವರದಿಯನ್ನು ಕಳುಹಿಸಿಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಹಿಂದೆಯೂ ಕೂಡ ಒಂದು ಸಾರಿ ಈ ವಿಷಯವನ್ನು ಸಭೆಯ ಗಮನಕ್ಕೆ ತಂದಿದ್ದರು. ಏನು ಒಂದು ರೀತಿಯ ರೋಗ ಬರುತ್ತಿದೆ ಅದರ ಬಗ್ಗೆ ತನಿಖೆಯಾಗಬೇಕೆಂದು. ಹೇಳಿ ಚರ್ಚೆ ಹಿಂದಿನ ಸಭೆಯಲ್ಲಿ ನಡೆದಿದೆ. ಹೆಣ್ಣುಮಕ್ಕಳ ಮಾರಾಟ ಗಡಿ ಪ್ರದೇಶದಲ್ಲಿ ನಡೆಯುವ ಬಗ್ಗೆ ತಾವು ತೀವ್ರವಾದಂತಹ ತನಿಖೆಯನ್ನು ಮಾಡಬೇಕು. ಪರಿಸ್ಥಿತಿಯ ಬಗ್ಗೆ ತಾವು ಕಾಳಜಿ ವಹಿಸಿ ಈ ಕೂಡಲೆ ಕ್ರಮ ಕೈಗೊಳ್ಳಬೇಕು.

ಶ್ರೀ ಆರ್. ಧರ್ಮಸಿಂಗ್: ಇದು ಗುರುತರವಾದುದು. ಬಹಳ ಜವಾಬ್ದಾರಿಯುತವಾಗಿದೆ. ಈಗಾಗಲೇ ನಮ್ಮ ಗಮನಕ್ಕೆ ಬಂದಿದೆ. ಸಂಬಂಧಪಟ್ಟಂಥ ಪೋಲೀಸ್ ಅಧಿಕಾರಿಗಳನ್ನು ವಿಚಾರಿಸಿ ಏನಾಗುತ್ತಿದೆ. ಅದರ ಬಗ್ಗೆ ತೀವ್ರವಾಗಿ ಗಮನಹರಿಸುತ್ತೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಸನ್ಮಾನ್ಯ ಗಂಗಾಧರಗೌಡರು ಒಂದು ಪ್ರಶ್ನೆಯನ್ನು ಎತ್ತಿದ್ದರು. ನಾನು ಈ ಸದನದಲ್ಲಿ ಹೋದ ಅಧಿವೇಶನದಲ್ಲಿ ಗೇಣಿದಾರರ ಕಂತು ರಿಯಾಯಿತಿ ಮಸೂದೆಯನ್ನು ಒಪ್ಪಿದ್ದೇವೆ. ಅದೇ ರೀತಿ ಬಗರ್‌ಹುಕುಂಗೂ ಆಯಿತು.

ಪಿ.ಎಲ್.ಡಿ. ಬ್ಯಾಂಕಿನ ಸಾಲದ ವಸೂಲಿ ಮುಂದುವರಿದಿದೆ. ಮತ್ತು ಬಗರ್‌ಹುಕುಂ ಎಂದು ಹೇಳಿ ಅಲ್ಲಿ ಬೆಳೆದಿರುವ ಬೆಳೆಯ ಹರಾಜು ಮುಂದುವರಿದಿದೆ. 12 ಸಾವಿರಕ್ಕಿಂತ ಮೇಲಿರುವುದು ಮತ್ತು 50 ಸಾವಿರ ರೂಪಾಯಿಗಿಂತ ಕೆಳಗೆ ಇರುವವರಿಗೂ ನೋಟೀಸನ್ನು ಜಾರಿ ಮಾಡುತ್ತಿದ್ದಾರೆ. ಇಲ್ಲಿ ಏನೇನು ಕಾನೂನನ್ನು ಮಾಡಿದ್ದೇವೆ. ಅದನ್ನು ಗಮನದಲ್ಲಿಟ್ಟುಕೊಂಡು ಅಧಿಕಾರಿಗಳು ಕೆಲಸ ಮಾಡಬೇಕೆಂದು ತಾವು ಸುತ್ತೋಲೆಯನ್ನು ಕಳುಹಿಸಿಕೊಡಬೇಕು.

ಶ್ರೀ ಆರ್. ಶ್ರೀನಿವಾಸಯ್ಯ: ಈಗಾಗಲೇ ಕಬಿನಿ ಬಲದಂಡೆ ನಾಲೆಯಲ್ಲಿ ಎರಡು ಸಾರಿ ನೀರು ಬಿಟ್ಟು ಜೋಳದ ಫಸಲು ಬಂದಿದೆ. ಮತ್ತು ಇನ್ನೊಂದು ಸಾರಿ ನೀರನ್ನು ಬಿಟ್ಟು ಆ ಜೋಳದ ಪಸಲನ್ನು ಉಳಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ : ನಾನು ಹಿಂದೆ ವಿಧಾನಸಭೆಯಲ್ಲಿ ಬೈಲಹೊಂಗಲದಲ್ಲಿ ಕುಡಿಯುವ ನೀರಿನ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಆಗ ಮುನಿಸಿಪಾಲಿಟಿಯವರಿಂದ ನೀರನ್ನು ಬೈಲಹೊಂಗಲಕ್ಕೆ ಸರಬರಾಜು ಮಾಡಲಾಗುವುದೆಂದು ಮಂತ್ರಿಯವರು ಉತ್ತರ ಕೊಟ್ಟಿದ್ದರು. ಆದರೆ ಮುನಿಸಿಪಾಲಿಟಿಯವರನ್ನು ಕೇಳಿದರೆ ಪಗಾರ ಕೊಡಲಿಕ್ಕೆ ಹಣವಿಲ್ಲ. ನಾವು ಎಲ್ಲಿಂದ ನೀರು ಸರಬರಾಜು ಮಾಡಬೇಕೆಂದು ಹೇಳುತ್ತಾರೆ. ನೀರಿನ ತೊಂದರೆ ಬಹಳವಿರುವುದರಿಂದ ಕೂಡಲೆ 20 ಬೋರ್‌ವೆಲ್‌ಗಳನ್ನು ಹಾಕಿಸಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಬೈಲಹೊಂಗಲ ತಾಲ್ಲೂಕಿನ ಉಕ್ಕುಂದ ಗ್ರಾಮದಲ್ಲಿಯೂ ಕುಡಿಯುವ ನೀರಿನ ತೊಂದರೆ ಬಹಳ ಇದೆ. ಇದರ ಬಗ್ಗೆ ಸಂಯುಕ್ತ ಕರ್ನಾಟಕದ ಪತ್ರಿಕೆಯಲ್ಲಿ ಸಹ ಬಂದಿದೆ. ಮಂಡಲ ಪಂಚಾಯತಿಯವರನ್ನು ರಿಪೇರಿ ಮಾಡಿಸಿ ಅಂದರೆ, ನಮ್ಮ ಹತ್ತಿರ ಹಣವಿಲ್ಲ ಎಂದು ಹೇಳುತ್ತಾರೆ. ಜಿಲ್ಲಾಪರಿಷತ್ತಿನವರನ್ನು ಕೇಳಿದರೆ ಮಂಡಲ ಪಂಚಾಯತಿಯವರು ಮಾಡಿಸಿಕೊಡಬೇಕೆಂದು ಹೇಳುತ್ತಾರೆ.

ನಾನು ಹಾಗೂ ಮಾನ್ಯ ಉಮೇಶ್ ಕಟ್ಟಿಯವರು ಒಂದು ಕಾಲಿಂಗ್ ಅಟೆನ್‌ಷನ್ ಕಳುಹಿಸಿದ್ದೆವು. ಮಲಪ್ರಭ, ಘಟಪ್ರಭ, ಕಾಡಾ ಯೋಜನೆಗೆ ಆಯವ್ಯಯ ಪಟ್ಟಿಯಲ್ಲಿ 504 ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಆದರೆ ಕೇವಲ 280 ಲಕ್ಷ ರೂಪಾಯಿಗಳನ್ನು ಮಾತ್ರ ಇಲ್ಲಿಯವರೆಗೆ ಖರ್ಚು ಮಾಡಲಾಗಿದೆ. ಆದ್ದರಿಂದ ಉಳಿದ 200 ಲಕ್ಷ ರೂಪಾಯಿಗಳ ಹಣ ಲ್ಯಾಪ್ಸ್ ಆಗುತ್ತದೆ. ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಸನ್ಮಾನ್ಯ ಕೌಜಲಗಿಯವರು ಬೈಲಹೊಂಗಲದಲ್ಲಿ ಕುಡಿಯುವ ನೀರಿನ ಅಭಾವದ ವಿಚಾರ ಹೇಳಿದ್ದಾರೆ. ಈಗಾಗಲೇ ರಾಜ್ಯದಲ್ಲಿ 6 ಕೋಟಿ ರೂಪಾಯಿಗಳನ್ನು ನಗರ ಪ್ರದೇಶದಲ್ಲಿ ನೀರು ಕೊಡುವುದಕ್ಕೆ ಜಿಲ್ಲೆಗಳ ಡೆಪ್ಯೂಟಿ ಕಮೀಷನರ್ಸ್‌ಗೆ ರಿಲೀಸ್ ಮಾಡಿದ್ದೇವೆ. ಕೂಡಲೇ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ.

ಶ್ರೀ ಹುಲ್ಲಪ್ಪ ಯಮುನಪ್ಪ ಮೇಟಿ: ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವಾದ ಗುಳೇದಗುಡ್ಡದಲ್ಲಿ 20ನೇ ತಾರೀಖಿನಿಂದ ಕೆಲವರು ಸ್ಟೈಕ್ ಕುಳಿತಿದ್ದಾರೆ. ಒಂದು ಜಾಗಕ್ಕೆ ಮುನಿಸಿಪಾಲಿಟಿಯವರು ಪರ್ಮಿಷನ್ ಕೊಟ್ಟಿದ್ದಾರೆ ಎನ್ನುವ ಸಲುವಾಗಿ ಒಂದು ಏಕತಾ ಸಮಿತಿಯನ್ನು ಮಾಡಿಕೊಂಡು ಸ್ಟೈಕ್ ಮಾಡುತ್ತಿದ್ದಾರೆ. ಪೊಲೀಸ್ ಲಾಟಿಛಾರ್ಜ್ ಅನಾವಶ್ಯಕ. ಅವರ ಬೇಡಿಕೆಗಳ ಸಲುವಾಗಿ ಸ್ಟೈಕ್ ಕುಳಿತುಕೊಂಡಿದ್ದಾರೆ. ಇಲ್ಲಿ 307ನೇ ಕಲಂ ಹಾಕಿ. ಇದರ ಬಗ್ಗೆ ಗೃಹ ಮಂತ್ರಿಗಳಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಪತ್ರ

ಬರೆದಿದ್ದೇನೆ. ಆದರೆ ಏನೂ ಕ್ರಮವನ್ನು ಕೈಗೊಂಡಿಲ್ಲ. ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು ತಮ್ಮ ಮೂಲಕ ಗೃಹ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್: ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತೆ ವಿಚಾರ ಈಗಾಗಲೇ ನಮ್ಮ ಗಮನಕ್ಕೆ ಬಂದಿದೆ. ಇದರ ಬಗ್ಗೆ ಕ್ರಮ ಜರುಗಿಸಲಾಗಿದೆ. ತಮ್ಮಿಂದ ಮತ್ತೇನಾದರೂ ಸಲಹೆ ಬೇಕಾದಲ್ಲಿ ತಮಗೆ ಫೋಸ್ ಮಾಡಿ ಮಾತನಾಡುತ್ತೇನೆ.

6) ರಾಜ್ಯದಲ್ಲಿ ಬಗರ್‌ಹುಕುಂ ಸಾಗುವಳಿಯ ಸಕ್ರಮ ಹಾಗೂ ಸಾಲ ವಸೂಲಾತಿಯ ತಡೆ.

ಶ್ರೀ ಮಲ್ಲಿಕಾರ್ಜುನ ಬಿಸಪ್ಪ ದಿವಟರ್: ಆಗಲೇ ಕಂದಾಯ ಸಚಿವರು ಇರಲಿಲ್ಲ. ನಾನು ಪ್ರಸ್ತಾಪ ಮಾಡಿದ ವಿಚಾರಕ್ಕೆ ಅವರ ಹೇಳಿಕೆಯನ್ನು ಕೊಡಿಸುವಿರ?

ಅಧ್ಯಕ್ಷರು: ಈಗ ಅವರು ಹೇಳುತ್ತಾರೆ. ಗಂಗಾಧರ ಗೌಡರ ವಿಚಾರಕ್ಕೆ ಉತ್ತರ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿ): ನಿನ್ನೆಯ ದಿನ ಇದನ್ನು ಸದಸ್ಯರಾದ ಗಂಗಾಧರಗೌಡರು ಕೂಡ ಪ್ರಸ್ತಾಪ ಮಾಡಿದ್ದಾರೆ. ನಾನು ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇವತ್ತು ಮುಖ್ಯ ಮಂತ್ರಿಗಳು ಸ್ಪಷ್ಟವಾದ ಸ್ಟೇಟ್‌ಮೆಂಟನ್ನು ಇದರ ಬಗ್ಗೆ ಕೊಡುತ್ತಿದ್ದಾರೆ. ರೈತರುಗಳ ಸಮಸ್ಯೆ ಏನಿದೆ ಅದರ ಬಗ್ಗೆ ಮತ್ತು ಗೇಣಿದಾರರ ರಿಕವರಿ ಬಗ್ಗೆ ಅವರು ಹೇಳುತ್ತಾರೆ. ನಿನ್ನೆ ಅವರು ಪ್ರಸ್ತಾಪ ಮಾಡಿದಾಗ ನಾನು ಹೇಳಿದೆ, ಎಲ್ಲಿ ಜಬರ್‌ದಸ್ತಾಗಿ ವಸೂಲು ಮಾಡುತ್ತಿದ್ದಾರೆ ಅಲ್ಲಿ ತೊಂದರೆ ಕೊಡಬಾರದೆಂದು ಒಂದು ಸುತ್ತೋಲೆಯನ್ನು ಸಹ ಕಳುಹಿಸಿದ್ದೇವೆ. ಆದರೂ ಕೂಡ, ಇದನ್ನು ಇನ್ನೆಲ್ಲಿ ಮಾಡಬಹುದು ಎನ್ನುವ ಬಗ್ಗೆ ನನ್ನ ಗಮನಕ್ಕೆ ತಂದರೆ, ತಕ್ಷಣ ಡೆಪ್ಯೂಟಿ ಕಮೀಷನರ್‌ಗೆ ಇದರ ಬಗ್ಗೆ ಬರೆದು ಮಾಹಿತಿಯನ್ನು ತರಿಸಿಕೊಂಡು ಸಂಬಂಧಪಟ್ಟವರಿಗೆ ಪತ್ರ ಬರೆಯುತ್ತೇನೆ. ಇದರ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ನಿನ್ನೆಯ ದಿನ ಸಾಯಂಕಾಲ ಹೇಳಿದ್ದೇನೆ. ಅವರು ಈ ಎಲ್ಲಾ ಸಮಸ್ಯೆಗಳ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಕೃಷಿಯೇತರ ಆದಾಯ 12,000 ರೂಪಾಯಿ ಇದ್ದುದನ್ನು 50,000 ರೂಪಾಯಿಗಳಿಗೆ ಏರಿಸಿದೆ. ಇದರಿಂದಾಗಿ ಈಗಾಗಲೇ ನಡೆದಿರತಕ್ಕಂಥ ವ್ಯವಹಾರಗಳ ಬಗ್ಗೆ ನೋಟೀಸ್ ಕೊಡುತ್ತಿದ್ದಾರೆ. ಅಂಥ ಖರೀದಿ ಪತ್ರಗಳನ್ನು ರಿಜಿಕ್ಟ್ ಮಾಡುತ್ತಿದ್ದಾರೆ. ಖರೀದಿ ಪತ್ರ ದಾಖಲೆ ಮಾಡುತ್ತಿಲ್ಲ. ಅದಕ್ಕಾಗಿ ಪೆಂಡಿಂಗ್ ಕೇಸ್ ಬಗ್ಗೆ ಮಾನ್ಯ ಸಚಿವರು ಇವರಿಗೆ ಸೂಕ್ತ ಆದೇಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಇದು ನೀವು ಸೆಕೆಂಡ್ ರೌಂಡ್ ಮಾತನಾಡುತ್ತಿರುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್: ಹಾಗೇನಿಲ್ಲ, ಉತ್ತರ ಸಿಕ್ಕಲಿಲ್ಲ. ಅದಕ್ಕೆ ಕೇಳುತ್ತಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ: ನಿನ್ನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿರುವಂಥ ವಿಚಾರವನ್ನು ನಮ್ಮ ಕಂದಾಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಬಗರ್‌ಹುಕುಂ 1968ನೇ ಇಸವಿಯಿಂದ ಮಾಡಿರುವ ದಾಖಲೆಗಳು ಇವೆ. ಇಲ್ಲಿ ಕಾನೂನು ಮಾಡುವುದರ ಮೂಲಕ ಇದು ಸಕ್ರಮಗೊಳ್ಳುತ್ತದೆ ಎಂದು ಹೇಳುತ್ತೀರಿ. ಆದರೆ ಅಲ್ಲಿ ಅಧಿಕಾರಿಗಳು ಗೇರು ಫಸಲನ್ನು ಹರಾಜು ಮಾಡಿದ್ದಾರೆ. ಈ ತರಹ ನಡೆದರೆ, ದೂರು ತಂದು ಹೇಳುವ ಕೆಲಸವನ್ನು ನಮಗೆ ಕೊಡುತ್ತಿದ್ದೀರಿ. ಇದು ಆಗದ ಹಾಗೆ ಒಂದು ಸುತ್ತೋಲೆಯನ್ನು ತಾವು ಕಳುಹಿಸಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಗಂಗಾಧರಗೌಡ: ವಿಧಾನಸೌಧದಿಂದ ಒಂದು ಸುತ್ತೋಲೆ ಏಕೆ ಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ. ಇದನ್ನು ನಿಯಮ 334ರಲ್ಲಿ ಕೇಳಿದ್ದೆ.